<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಶಿಡ್ಲಘಟ್ಟ</u>

**ಅಸಲು ದಾವಾ ಸಂಖ್ಯೆ:396/2011**

**ಪಿ.ಡಬ್ಲ್ಯು.1**

ದಿನಾಂಕಃ 20-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ.ಎಮ್.ಪಿ.ಆರ್ ರವರಿಂದ</u>

ಸರ್ವೆ ನಂ.65/1 ಒಟ್ಟು ವಿಸ್ತೀರ್ಣ 4 ಎಕರೆ 31 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ವೆಂಕಟಪ್ಪರವರಿಗೆ ಎಷ್ಟು ಜಮೀನಿಗೆ ಎಂದು ನನಗೆ ಗೊತ್ತಿಲ್ಲ. ನನ್ನ ಜಮೀನಿನ ಪೂರ್ವಕ್ಕೆ ವೆಂಕಟಪ್ಪರವರ ಜಮೀನು, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ಮುನಿಶಾಮಪ್ಪರವರ ಜಮಿನು ಮತ್ತು ದಕ್ಷಿಣಕ್ಕೆ ಸರ್ವೆ ನಂ.65/1ರ ಉಳಿಕೆ ಜಮೀನಿದೆ ಎಂದರೆ ಸರಿ ಅಲ್ಲ. ದಕ್ಷಿಣಕ್ಕೆ ಸರ್ವೆ ನಂ.65/1ರ ನನ್ನದೇ ಜಮೀನು ಇದೆ. ದಕ್ಷಿಣಕ್ಕೆ ಸರ್ವೆ ನಂ.65/1ರ ನನ್ನದೇ ಜಮೀನು ಇಲ್ಲ ಎಂದರೆ ಸರಿ ಅಲ್ಲ.

ದಾವಾ ಐಟಂ ನಂ.1 ವಾದಿಗೇ ಸೇರಿದ್ದು ಎಂದರೆ ಸರಿ ಅಲ್ಲ, ಸರ್ಕಾರಕ್ಕೆ ಸೇರಿದ್ದು. ದಾವಾ ಐಟಂ ನಂ.1 ಘಟ್ಟಾರ್ಲಹಳ್ಳಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.65/1ರ ದಕ್ಷಿಣಕ್ಕೆ ಘಟ್ಟಾರ್ಲಹಳ್ಳಿ ಬರುತ್ತದೆಂದರೆ ಸರಿ ಅಲ್ಲ. ವಾದಿಯು 2 ಆಸ್ತಿಗಳ ಮೇಲೆ ದಾವೆ ಹಾಕಿದ್ದಾರೆಂದರೆ ಸರಿ ಅಲ್ಲ ಒಂದು ಆಸ್ತಿಯ ಮೇಲೆ ಕೇಸು ಹಾಕಿರುತ್ತಾರೆ.

ದಾವಾ ಐಟಂ ನಂ.1ರ ಚೆಕ್ಕುಬಂದಿ ಪೂರ್ವಕ್ಕೆ ವಂಕೆ, ಪಶ್ಚಿಮಕ್ಕೆ ಕೃಷ್ಣಪ್ಪರವರ ಜಮೀನು ಉತ್ತಟಕ್ಕೆ ವಾದಿಗೆ ಸೇರಿದ ಜಮೀನು ದಕ್ಷಿಣಕ್ಕೆ ಮುನಿವೆಂಕಟಪ್ಪರವರ ಜಮೀನು ಎಂದರೆ ನನಗೆ ಗೊತ್ತಿಲ್ಲ, ದಾವಾ ಐಟಂ ನಂ.1ಕ್ಕೂ ನನಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿ ಅಲ್ಲ. ದಾವಾ ಐಟಂ ನಂ.2ರ ಚೆಕ್ಕುಬಂದಿ ಪೂರ್ವಕ್ಕೆ ವಂಕೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ನನಗೆ ಸೇರಿದ ಜಮೀನು ಮತ್ತು ದಕ್ಷಿಣಕ್ಕೆ ಸರ್ವೆ ನಂ.1ರ ವಾದಿಗೆ ಸೇರಿದ

ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2ಕ್ಕು ನನಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿ.

ನನಗೆ ಮಂಜೂರಾಗಿರುವ ಜಮೀನಿಗೆ ಸಂಬಂದಿಸಿದ ಸಾಗುವಳಿ ಚೀಟಿಯನ್ನು ಹಾಜರು ಪಡಿಸಿರುತ್ತೇನೆ. ಸದರಿ ಸಾಗುವಳಿ ಚೀಟಿಯಲ್ಲಿ ಚೆಕ್ಕುಬಂದಿ ಇದೆ. ನನ್ನ ಜಮೀನ್ನು ಸರ್ವೆ ಮಾಡಿಸಿದ್ದೀನಿ. ಸರ್ವೆ ಸ್ಕೆಚ್‌ನಲ್ಲಿ ನನ್ನ ಜಮೀನಿನ ದಕ್ಷಿಣಕ್ಕೆ ಸರ್ವೆ ನಂ.1ರ ಮಾಲೀಕರು ಸ್ವಾದೀನದಲ್ಲಿದ್ದಾರೆಂದು ನಮೂದಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ವಾದಿಯು ದಾವಾ ಐಟಂ ನಂ.2ಕ್ಕೆ ಸಂಬಂದಿಸಿದಂತೆ ನನ್ನ ವಿರುದ್ದ ಎ.ಸಿ ಕೊರ್ಟ್‌ನಲ್ಲಿ ಕೇಸು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ವೆಂಕಟರಾಯಪ್ಪ ಬಿನ್ ದೊಡ್ಡಮುನಿಶಾಮಪ್ಪ ಎಂದರೆ ನಾನೇ. ಆರ್.ಎ.ನಂ.6/2010ರಂತೆ ನನ್ನ ವಿರುದ್ದ ಆದೇಶ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತುಗಳಿಗೂ ನಮಗೂ ಯಾವುದೇ ಸಂಬಂದ ಇಲ್ಲದಿದ್ದರೂ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ. ಸಾಗುವಳಿ ಚೀಟಿಯಲ್ಲಿ ಚೆಕ್ಕುಬಂದಿ ನಮೂದಿಸಿಲ್ಲದ ಕಾರಣ ಅದನ್ನು ಹಾಜರು ಪಡಿಸಿದರೆ ನಿಜಾಂಶ ಗೊತ್ತಾಗುತ್ತದೆಂದು ಹಾಜರು ಪಡಿಸಿಲ್ಲ ಎಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ. ರೋಹಿಣಿ. ಡಿ)
ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ
ಶಿಡ್ಲಘಟ್ಟ.